ಸೂಚನೆಯನ್ನು ಕಳುಹಿಸಿದ್ದೀರಿ ಅದಕ್ಕೆ ನಗರಾಭಿವೃದ್ಧಿ ಮಂತ್ರಿಗಳು 10 ದಿವಸ ಕಾಲ ಬೇಕಾಗುತ್ತದೆ. ಈ ಮಾಹಿತಿ ನನಗೆ ಇನ್ನೂ ಲಭ್ಯ ಆಗಿಲ್ಲ ಎಂದು ಹೇಳಿದ್ದಾರೆ. 10 ದಿವಸಗಳ ಒಳಗಾಗಿ ನಾನು ತಮಗೆ ಉತ್ತರ ಕಳುಹಿಸಿ ಕೊಡುತ್ತೇನೆ. ಆದ್ದರಿಂದ ತಾವು ಪ್ರಸ್ತಾಪ ಮಾಡಬೇಕಾದ ಅಗತ್ಯ ಇಲ್ಲ.

11. ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಕ್ಲೋರೈಡ್ ಕಂಟೆಂಟ್ ಇದ್ದು ಜನರಿಗೆ ತೊಂದರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ಬಾಗೇಪಲ್ಲಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನಲ್ಲಿ ಕ್ಲೋರೈಡ್ ಕಂಟೆಂಟ್ ವಿಪರೀತವಾಗಿ ನ್ಯೂರ್ಯಾಸಿಸ್ ಎನ್ನತಕ್ಕಂಥ ಅಪಾಯಕರವಾದಂತಹ ಖಾಯಿಲೆ ಇದೆ ಅಂತ ಹೇಳಿ ಇತ್ತೀಚಿನ ಸರ್ವೆ ಪ್ರಕಾರ ಕಂಡು ಬಂದಿದ್ದು ಆ ನೀರನ್ನು ಕುಡಿಯಬಾರದು ಎಂದು ಹೇಳಿ ವೈದ್ಯರು ಮತ್ತು ವಿಜ್ಞಾನಿಗಳು ಸಲಹೆ ಮಾಡಿದ್ದಾರೆ. ಆದ್ದರಿಂದ ಕುಡಿಯುವ ನೀರಿಗೆ ಬಹಳ ತೊಂದರೆ ಆಗಿದೆ. ಇರತಕ್ಕಂಥ ನೀರನ್ನು ಸಹ ಕುಡಿಯುವುದಕ್ಕೆ ಅಲ್ಲಿನ ಜನ ಭಯಭೀತರಾಗಿದ್ದಾರೆ. ಅದರ ಜೊತೆಗೆ ಕುಡಿಯುವ ನೀರಿಗಾಗಿ ತೋಡಿರತಕ್ಕಂಥ ಕೊಳವೇ ಬಾವಿಗಳಲ್ಲಿ ಕೈ ಪಂಪ್ಗಳನ್ನು ಹಾಕುವುದಕ್ಕೂ ಕೂಡ ಸಂಬಂಧಪಟ್ಟ ಇಲಾಖೆಗಳು ಹಿಂಜರಿಯುತ್ತಿದ್ದಾರೆ. ಅಲ್ಲಿ ಕುಡಿಯುವ ನೀರಿಗೆ ಭಾರಿ ತೊಂದರೆ ಆಗಿದ್ದು ಅಪಾಯಕಾರಿಯಾದಂತಹ ಖಾಯಿಲೆ ಅಂದರೆ ಹಲ್ಲು ಮತ್ತು ಮೂಳೆಗಳ ಖಾಯಿಲೆ ಆಗಿ ಚಾಕ್ಪೀಸ್ ಪುಡಿ ರೂಪದಲ್ಲಿ ಮೂಳೆ ಮತ್ತು ಹಲ್ಲುಗಳು ಹೋಗುತ್ತದೆ ಎಂದು ಹೇಳತಕ್ಕಂಥ ಅಪಾಯಕಾರಿಯಾದ ಖಾಯಿಲೆ ಬರುವ ಸಾಧ್ಯತೆಗಳಿವೆ. ಆದ್ದರಿಂದ ಈ ಖಾಯಿಲೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ದೇಶದ ಕೆಲವು ಭಾಗದಲ್ಲಿ ಪಂಜಾಬಿನ ಚಂಡಿಗಡದಲ್ಲಿ ಆಂಧ್ರದ ಪುಟಪರ್ತಿ ಗ್ರಾಮದಲ್ಲಿ ನೀರಿನ ಟ್ಯಾಂಕರ್ಗಳಿಗೆ ಫಿಲ್ಟರ್ಗಳನ್ನು ಅಳವಡಿಸಿಬೇಕು. ಇಲ್ಲಿ ಕುಡಿಯುವ ನೀರು ಇಲ್ಲದೆ ಇಡೀ ತಾಲ್ಲೂಕಿನಲ್ಲಿ ಈ ಖಾಯಿಲೆಯಿಂದಾಗಿ ಜನ ಭಯಭೀತರಾಗಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಮಂತ್ರಿಗಳು ತಕ್ಷಣ ಇದನ್ನು ತುರ್ತು ಸಮಸ್ಯೆ ಎಂದು ಪರಿಗಣಿಸಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರ ಮೂಲಕ ಒತ್ತಾಯ ಮಾಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥ ವಿಷಯವನ್ನು ಸರ್ಕಾರ ಗಮನಿಸಿದೆ. ಅದಕ್ಕೆ ಸೂಕ್ತವಾದ ಕ್ರಮವನ್ನು ಏನು ಕೈಗೊಳ್ಳುತ್ತೇವೆಂಬುದರ ಬಗ್ಗೆ ಮಾನ್ಯ ಸದಸ್ಯರಿಗೆ ಬರೆದು ತಿಳಿಸುತ್ತೇನೆ.

ಶ್ರೀ ಯು.ಬಿ. ಬಣಕಾರ್ : ಮಾನ್ಯ ಅಧ್ಯಕ್ಷರೇ, ಅವರು ನನಗೆ ಒಂದು ಆಥರೈಸೇಷನ್ ಲೆಟರ್ ಕೊಟ್ಟಿದ್ದಾರೆ. ನಾನೇ ಓದಿಬಿಡುತ್ತೇನೆ. ಅಕ್ಕಾಯ್ ಸಮಿತಿಗಳನ್ನು ರದ್ದು ಮಾಡಿದ್ದರ ಬಗ್ಗೆ ಅವರು ಗಮನಸೆಳೆದಿದ್ದಾರೆ.

ಅಧ್ಯಕ್ಷರು : ನನಗೆ ಬಂದಿಲ್ಲವಲ್ಲಾ, ಅವರು ಗಮನ ಸೆಳೆದಿಲ್ಲ ಬಣಕಾರ್ರವರೇ, ಅವರು 351ನೇ ನಿಯಮಾವಳಿ ಪ್ರಕಾರ ನೋಟೀಸ್ ಕೊಟ್ಟಿದ್ದರು. ಕೊಟ್ಟಿರತಕ್ಕಂಥವರೇ ಪ್ರಸ್ತಾಪ ಮಾಡಬೇಕು. ಅವರು ಗೈರು ಹಾಜರಾಗುವುದಾದರೆ ಅವರ ಪರವಾಗಿ ತಾವು ಕೇಳಲು ಆಥರೈಸೇಷನ್ ಕೊಟ್ಟಿದ್ದರೆ ಅದನ್ನು ಬರೆದು ನನಗೆ ಮೊದಲು ತಿಳಿಸಬೇಕು. ಆ ರೀತಿ ಆಗಿಲ್ಲ, ಆದ್ದರಿಂದ ತಾವು ಸುಮ್ಮನೆ ಇದ್ದುಬಿಡಿ.

12. ಶ್ರವಣಬೆಳಗೊಳ ಕ್ಷೇತ್ರದ ಎ.ಜಿ. ರಾಮಚಂದ್ರರಾಯರ ನಾಲೆ ವಿಚಾರ

ಶ್ರೀ ಸಿ.ಎಸ್. ಪುಟ್ಟೇಗೌಡ (ಚನ್ನರಾಯಪಟ್ಟಣ) : ಮಾನ್ಯ ಅಧ್ಯಕ್ಷರೇ, ನಮ್ಮ ಶ್ರವಣಬೆಳಗೊಳ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಎ.ಜಿ. ರಾಮಚಂದ್ರರಾಯರ ನಾಲೆ ಹರಿದು

ಈಗಾಗಲೇ ಅದರಿಂದ ಜನ ನೀರನ್ನು ಕಸಿದುಕೊಳ್ಳುತ್ತಿದ್ದಾರೆ. ಈ ಒಂದು ಸಂದರ್ಭದಲ್ಲಿ ಕಳೆದ 6 ತಿಂಗಳಿಂದ ಕೂಡ ಕೆನಾಲ್ 98ನೇ ಕಿಲೋಮೀಟರ್‌ನಲ್ಲಿ ಒಡೆದು ಹೋಗಿ ಮತ್ತೆ ರಿಪೇರಿ ಮಾಡಿದ್ದಾರೆ. ಆ ಕಾಲುವೆ ಅದೇ ಜಾಗದಲ್ಲಿ ಮತ್ತೆ ಈ ಮೂರು ದಿವಸಗಳ ಹಿಂದೆ ಒಡೆದು ಹೋಗಿದೆ. ಆದ್ದರಿಂದ ದಯಮಾಡಿ ಏನು ಹೇಮಾವತಿ ಕೆನಾಲ್ ಕೆಲಸ ಮಾಡತಕ್ಕಂಥ ಅಧಿಕಾರಿಗಳು ಇದ್ದಾರೆ ಅವರಿಗೆ ಭಾರಿ ನೀರಾವರಿ ಸಚಿವರು ಆದೇಶ ಕೊಡಬೇಕು ಈ ಕೆನಾಲ್ ಬರೀ ತೋಡುವುದು ಅಥವಾ ಮುಚ್ಚುವುದು ಆಗ ಬಾರದು. ಇದು ಇರುವುದು ಎಂಜನೀಯರ್ ಮತ್ತು ಗುತ್ತಿಗೆದಾರರಿಗೆ ಅಲ್ಲ; ರೈತರಿಗೋಸ್ಕರ ಎಂಬುದನ್ನು ತಿಳಿದುಕೊಳ್ಳಬೇಕು. ರೈತರ ದುಡ್ಡು ಖರ್ಚಾಗುವಾಗ ಅಂಕಿಅಂಶಗಳನ್ನು ಹೇಳಬಾರದು. ಜನಕ್ಕೆ ಅದರಿಂದ ಎಷ್ಟರಮಟ್ಟಿಗೆ ಉಪಯೋಗ ಆಯಿತು ಎನ್ನತಕ್ಕಂಥಾದ್ದು ಬಹಳ ಮುಖ್ಯ ಈ ಎರಿ ನಿರ್ಮಾಣದ ಕೆಲಸ ತುರ್ತಾಗಿ ಆಗಬೇಕು ಆಗಿರತಕ್ಕಂಥ ಅನಾಹುತವನ್ನು ತಪ್ಪಿಸಬೇಕೆಂದು ನಾನು ರೈತರ ಪರವಾಗಿ ಮಾನ್ಯ ಭಾರಿ ನೀರಾವರಿ ಸಚಿವರಿಗೆ ವಿನಂತಿ ಮಾಡುತ್ತೇನೆ.

ಶ್ರೀ ಜೆ.ಎಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಭಾನಾಯಕರ ಗೈರು ಹಾಜರಿಯಲ್ಲಿ ನಾನು ಇಷ್ಟು ಮಾತ್ರ ಹೇಳಲು ಇಷ್ಟಪಡುತ್ತೇನೆ. 9ನೇ ಕಿಲೋಮೀಟರ್‌ನಲ್ಲಿ ಈ ನಾಲೆ ಒಡೆದಿರುವುದರಿಂದ ಬಹಳ ಜನರಿಗೆ ತೊಂದರೆಯಾಗಿರುವುದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಆದಷ್ಟು ಬೇಗ ಯಾವ ರೀತಿ ಪರಿಹಾರ ಕಾರ್ಯಕ್ರಮ ಕೈಗೊಳ್ಳಬೇಕು ಎನ್ನುವುದನ್ನು ನಿರ್ಧರಿಸಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ. ಮಾನ್ಯ ಮುಖ್ಯಮಂತ್ರಿಗಳೇ ಈ ಇಲಾಖೆಯ ಜವಾಬ್ದಾರಿ ಹೊತ್ತಿದ್ದಾರೆ.

ಅಧ್ಯಕ್ಷರು : ಈಗ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಮುಂದುವರೆದ ಚರ್ಚೆ.

ಶ್ರೀ ಎಸ್.ಆರ್. ಗುತ್ತೇದಾರ್ : ಮಾನ್ಯ ಅಧ್ಯಕ್ಷರೇ

ಅಧ್ಯಕ್ಷರು : ಗುತ್ತೇದಾರ್‌ರವರೇ, ತಾವು ಅನಂತರ ಬಂದು ನನ್ನ ಕೊಠಡಿಯಲ್ಲಿ ಭೇಟಿ ಮಾಡಿ.

ಶ್ರೀ ಎಸ್.ಆರ್. ಗುತ್ತೇದಾರ್ : ನಮ್ಮ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ.

ಅಧ್ಯಕ್ಷರು : ಆಮೇಲೆ ಬನ್ನಿ. ನಿಮಗೆ ಸಹಾಯ ಮಾಡೋಣ.

ಶ್ರೀ ಎಸ್.ಆರ್. ಗುತ್ತೇದಾರ್ : ಕುಡಿಯುವ ನೀರಿನ ಸಮಸ್ಯೆ ಇದೆ. ಅದು ಬಗೆಹರಿಯಬೇಕು. ಚರ್ಚೆ ಮಾಡುವುದರಿಂದ ಏನೂ ಪ್ರಯೋಜನ ಇಲ್ಲ.

ಅಧ್ಯಕ್ಷರು : ಆ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ. ತಾವು ದಯವಿಟ್ಟು ಆಮೇಲೆ ನನ್ನ ಕೊಠಡಿಗೆ ಬನ್ನಿ.

ಶ್ರೀ ಎಸ್.ಆರ್. ಗುತ್ತೇದಾರ್ : ನನ್ನದು ತಮ್ಮಲ್ಲಿ ಕಳಕಳಿಯ ವಿನಂತಿ ಇದೆ.

ಅಧ್ಯಕ್ಷರು : ನನ್ನದು ತಮ್ಮಲ್ಲಿ ಕಳಕಳಿಯ ವಿನಂತಿ. ದಯಮಾಡಿ ನನ್ನ ಕೊಠಡಿಗೆ ಬಂದು ಭೇಟಿ ಆಗಿ ಈಗ ಮಾನ್ಯ ವಾಟಾಳ್ ನಾಗರಾಜ್ ರವರು ಮಾತನಾಡುತ್ತಾರೆ. ದಯಮಾಡಿ ತಾವು ಸಹಕರಿಸಿ.

ಶ್ರೀ ಎಸ್.ಆರ್. ಗುತ್ತೇದಾರ್ : ನಮ್ಮ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ ಮಾತನಾಡುವುದು ಏನೂ ಬೇಕಾಗಿಲ್ಲ.

ಅಧ್ಯಕ್ಷರು : ಬಗೆಹರಿಸೋಣ. ನಾನು ತಮ್ಮ ಜೊತೆಗೆ ಇರುತ್ತೇನೆ. ವಾಟಾಳ್ ನಾಗರಾಜ್‌ರವರೇ ಮಾತನಾಡಿ. ನೀವು ನಿಧಾನ ಮಾಡಿದರೆ ಈ ರೀತಿ ಎದ್ದು ನಿಂತುಕೊಂಡು ಬಿಡುತ್ತಾರೆ.

ಶ್ರೀ ಎಸ್.ಆರ್. ಗುತ್ತೇದಾರ್ : ಮಾನ್ಯ ಅಧ್ಯಕ್ಷರೇ, ದಯವಿಟ್ಟು ಅವಕಾಶ ಕೊಡಿ.

ಅಧ್ಯಕ್ಷರು : ಒಂದು ನಿಮಿಷ. ಎಷ್ಟು ಸಮಯ ನಮಗೆ ಇರುತ್ತದೆ ಯಾವ ಯಾವ ಕಾರ್ಯಕ್ರಮಕ್ಕೆ ಎಷ್ಟು ಸಮಯ ನಿಗಧಿ ಮಾಡಬೇಕು ಎಂದು ನಿಮ್ಮ ನಾಯಕರುಗಳು ಆದಿಯಾಗಿ ಸದನದ ಕಾರ್ಯಕಲಾಪಗಳ ಸಮಿತಿಯಲ್ಲಿ ನಾವು ಇತ್ಯರ್ಥ ಮಾಡಿರುತ್ತೇವೆ. ಎಲ್ಲಾ ಸದಸ್ಯರು ಕೂಡ ತಮ್ಮ ಬಯಕೆಯನ್ನು ವ್ಯಕ್ತ ಮಾಡಿರುತ್ತಾರೆ. ಸದನದ ಸಮಯ ಎಷ್ಟು ನಮಗೆ ಲಭ್ಯವಾಗಿರುತ್ತದೆ ಅದನ್ನು ನೋಡಿಕೊಂಡು ನಾವು ಕಾರ್ಯಕ್ರಮದ ಪಟ್ಟಿಯನ್ನು ಮಾಡಿರುತ್ತದೆ. ಈ ದಿವಸ ಕಡೆಯ ದಿವಸ. ಅದಕ್ಕೆ ಎಷ್ಟು ಸಾಧ್ಯವೋ ಅಷ್ಟು ತಂದಿದ್ದೇವೆ. ಬಹಳ ಜರೂರಾಗಿದ್ದರೆ ಆಮೇಲೆ ನನ್ನ ಕೊಠಡಿಯಲ್ಲಿ ತಾವು ಬಂದು ಭೇಟಿ ಆಗಿ, ಸಚಿವರ ಜೊತೆಯಲ್ಲಿ ಮಾತನಾಡಿ ತಮಗೆ ಏನು ಸೌಕರ್ಯಬೇಕೋ ಅದನ್ನು ಮಾಡಿಸಿಕೊಡುತ್ತೇನೆ.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಮೇಲಿನ ಚರ್ಚೆ (ಮುಂದುವರೆದಿದ್ದು)

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಹೊಸ ಸರ್ಕಾರ ಬಂದಮೇಲೆ ರಾಜ್ಯಪಾಲರ ಈ ಒಂದು ಭಾಷಣ ಮಾಡಿದ್ದಾರೆ. ಮೊದಲನೆಯದಾಗಿ ನಾನು ರಾಜ್ಯಪಾಲರ ಭಾಷಣದ ವ್ಯವಸ್ಥೆಯನ್ನೇ ಮೊದಲಿನಿಂದಲೂ ವಿರೋಧ ಮಾಡುತ್ತಿದ್ದೇನೆ. ಈ ವ್ಯವಸ್ಥೆ ಒಂದು ನಾಟಕೀಯವಾಗಿದೆ. ಇದು ಸಂವಿಧಾನ ಬದ್ಧವಾಗಿ ಇರತಕ್ಕಂಥ ವ್ಯವಸ್ಥೆ ಇದ್ದರೂ ದೇಶದ ಚಿಂತಕರೆಲ್ಲರೂ ಇದರ ಬಗ್ಗೆ ಚಿಂತನೆಯನ್ನು ಮಾಡಬೇಕಾದುದು ಅತಿ ಮುಖ್ಯವಾದಂತಹ ಕರ್ತವ್ಯ. ರಾಜ್ಯಪಾಲರು ಭಾಷಣ ಏನಿದೆ ಇದು ರಾಜ್ಯಪಾಲರೇ ತಯಾರು ಮಾಡಿ ಓದಿದಂತಹ ಭಾಷಣ ಅಲ್ಲ, ಇದು ರಾಜ್ಯ ಸರ್ಕಾರ ಸಚಿವ ಸಂಪುಟ ತಯಾರಿಸಿದಂತಹ ಭಾಷಣವನ್ನು ರಾಜ್ಯಪಾಲರ ಬಾಯಿಯಲ್ಲಿ ಹೇಳಿಸುವ ವಿಧಾನ, ಇದು ಒಂದು ರೀತಿ ಪರಕಾಯ ಪ್ರದೇಶ. ರಾಜ್ಯಪಾಲರು ಹೆಸರಿಗೆ ಅವರ ಬಾಯಲ್ಲಿ ಬರುವ ಪದಗಳೆಲ್ಲವೂ ಸರ್ಕಾರ ತಯಾರು ಮಾಡಿದಂತಹ ಪದಗಳು. ಅವರು ಈ ಸದನದಲ್ಲಿ ಜಂಟಿ ಅಧಿವೇಶನ ಉದ್ದೇಶಿಸಿ ಮಾತನಾಡುವಾಗ ರಾಜ್ಯ ಸರ್ಕಾರ ತಯಾರು ಮಾಡಿದ ಒಂದು ಪದವನ್ನು ಸಹ ಬದಲಾವಣೆ ಮಾಡತಕ್ಕಂಥ ವ್ಯವಸ್ಥೆ ಇಲ್ಲ, ಯಾವುದೇ ಸರ್ಕಾರ ಬಂದರೂ ನನ್ನ ಸರ್ಕಾರ ನನ್ನ ಸರ್ಕಾರ ಎಂದು ಅವರು ತಮ್ಮ ಭಾಷಣದಲ್ಲಿ ಹೇಳಲೇಬೇಕು. ಒಂದು ರೀತಿ ರಾಜ್ಯಪಾಲರನ್ನು ಸರ್ಕಾರ ಬದಲಾವಣೆ ಆದಾಗಲೆಲ್ಲಾ ಪಕ್ಷಾಂತರವನ್ನು ನಾವು ಮಾಡಿಸುತ್ತಿದ್ದೇವೆ. ಕಾಂಗ್ರೆಸ್ ಸರ್ಕಾರ ಬಂತು ನನ್ನ ಸರ್ಕಾರ ಎಂದು ಹೇಳಿದರು. ಈಗ ಜನತಾದಳ ಸರ್ಕಾರ ಬಂತು ನನ್ನ ಸರ್ಕಾರ ಎಂದು ಹೇಳುತ್ತಾರೆ. ನಾಳೆ ಇನ್ನೊಂದು ಸರ್ಕಾರ ಬಂದರೆ ನನ್ನ ಸರ್ಕಾರ ನನ್ನ ಸರ್ಕಾರ ಎಂದು ಹೇಳುತ್ತಾರೆ. ನನ್ನದು ಬಂದರೂ ಅಷ್ಟೇ, ನಿಮ್ಮದು ಬಂದರೂ ಅಷ್ಟೇ, ಯಾವುದೇ ಸರ್ಕಾರ ಬರಲಿ ಇದನ್ನು ಹೇಳುತ್ತಾರೆ. ನನಗೆ ರಾಜ್ಯಪಾಲರ ಬಗ್ಗೆ ವ್ಯಕ್ತಿಗತವಾಗಿ ಅಪಾರವಾದ ಗೌರವ ಇದೆ. ನಾನು ಯಾವುದೇ ಸಂದರ್ಭದಲ್ಲೂ ಎಷ್ಟು ಪ್ರಾಮಾಣಿಕವಾದ ಗೌರವ ಕೊಡಬೇಕೋ ಅದನ್ನು ಕೊಟ್ಟಿದ್ದೇನೆ. ಈ ವ್ಯವಸ್ಥೆ ಸರಿ ಇಲ್ಲ ಎನ್ನತಕ್ಕಂಥಾದ್ದು ನನ್ನ ಭಾವನೆ.